# ಹೊಸತು




## ನಿಕಾನ್‌ನಿಂದ ಕೂಲ್ ಫಿಕ್ಸ್ ಸ್ಪ್ರಿಂಗ್

ಫೋಟೋಗ್ರಫಿ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ನಿಕಾನ್ ಇಂಡಿಯಾ ಇದೀಗ ಕೂಲ್ ಫಿಕ್ಸ್ ಸ್ಪ್ರಿಂಗ್ ಸರಣಿ ಕ್ಯಾಮರಾಗಳನ್ನು ಹೊರತಂದಿದೆ. ಫೋಟೋಗ್ರಫಿ ಆರಂಭಿಸುವವರು, ಉತ್ಸಾಹಿಗಳು, ಹವ್ಯಾಸಿ ಛಾಯಾಗ್ರಾಹಕರ ನಾನಾ ಬಗೆಯ ಚಿತ್ರೀಕರಣ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಈ ಸರಣಿ ಕ್ಯಾಮರಾಗಳನ್ನು ಬಿಡುಗಡೆ ಮಾಡಲಾಗಿದೆ ಎನ್ನುತ್ತದೆ ಕಂಪೆನಿ.

ಆಕರ್ಷಕ ವಿನ್ಯಾಸ, ಬಣ್ಣಗಳ ಆಯ್ಕೆಗಳು ಇದರಲ್ಲಿವೆ. 60 ಎಕ್ಸ್ ಜೂಮ್, ಡೈನಾಮಿಕ್ ಫೈನ್ ಜೂಮ್, ಎಚ್‌ಡಿ ವೀಡಿಯೊ ರೆಕಾರ್ಡಿಂಗ್, ವೈ-ಫೈ, ಜಿಪಿಎಸ್ ತಂತ್ರಜ್ಞಾನ ಇದರಲ್ಲಿವೆ. 16 ಹೊಸ ಮಾದರಿಗಳಲ್ಲಿ ಇವೆ. ಅತ್ಯುತ್ತಮ ಗುಣಮಟ್ಟದ, ಸಂಶೋಧನಾತ್ಮಕ ಉತ್ಪನ್ನ ಇದಾಗಿದೆ ಎಂದು ಹೇಳುತ್ತದೆ ಕಂಪೆನಿ.

ಬೆಲೆ 18,950 ರೂಪಾಯಿಗಳಿಂದ 23,950ರೂಪಾಯಿ.



## ತಾನಿಷ್ಕ್ ಝ್ಯುರ ವಜ್ರಾಭರಣ


ವಜ್ರಾಭರಣಕ್ಕೆ ಹೆಸರಾದ ತಾನಿಷ್ಕ್, ಇದೀಗ 'ಝ್ಯುರ' ಎಂಬ ಹೆಸರಿನ ಹೊಸ ಸಂಗ್ರಹವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಹೂವು ಮತ್ತು ಹೂವಿನ ದಳಗಳಿಂದ ಸ್ಫೂರ್ತಿ ಪಡೆದ ಈ ಸಂಗ್ರಹ, ಬಿಳಿ ಮತ್ತು ಹಳದಿ ಬಂಗಾರದಲ್ಲಿ ಕೆತ್ತನೆಗೊಂಡಿದೆ. ಇದರಲ್ಲಿ ಬಿಳಿ ವಜ್ರ ಮತ್ತು ಬಣ್ಣದ ಹರಳುಗಳನ್ನು ಕೂಡಿಸಲಾಗಿದೆ. 130ಕ್ಕೂ ಹೆಚ್ಚು ವಿನ್ಯಾಸಗಳಲ್ಲಿ ಲಭ್ಯ. ನೆಕ್ಲೆಸ್, ಬಳೆ, ಕಿವಿಯೋಲೆ, ಉಂಗುರ ಮತ್ತು ಪದಕದ ಸೆಟ್‌ಗಳು ಈ ಸಂಗ್ರಹದಲ್ಲಿವೆ. ಬೆಲೆ 25 ಸಾವಿರ ರೂಪಾಯಿ. ಮಾಹಿತಿಗೆ: 9986786811

## ಲೆನೊವೊ ಎ 526 ಸ್ಮಾರ್ಟ್‌ಫೋನ್

ಅತ್ಯಂತ ಕಡಿಮೆ ವೆಚ್ಚದ ಹೊಸ ಲೆನೊವೊ ಎ 526 ಸ್ಮಾರ್ಟ್ ಫೋನ್ ಮಾರುಕಟ್ಟೆಗೆ ಬಂದಿದೆ. ಇದನ್ನು ಉತ್ತಮ ತಂತ್ರಜ್ಞಾನದಿಂದ ತಯಾರು ಮಾಡಲಾಗಿದ್ದು, ಕ್ವಾಡ್ ಕೋರ್ 1.3 ಜಿಎಚ್ ಸಿಪಿಯು ಮತ್ತು 4.5" ಡಬ್ಲ್ಯುವಿಜಿಎ ಡಿಸಪ್ಲೇ ಹೊಂದಿದೆ.

ಇದರಲ್ಲಿ ಆಂಡ್ರಾಯ್ಡ್ ಜೆಲ್ಲಿ ಬೀನ್ ಮತ್ತು ಇತರೆ ಆಪ್‌ಗಳು ಇದ್ದು, 32ಜಿಬಿ ಸ್ಟೋರೇಜ್ ಸಾಮರ್ಥ್ಯ ಹೊಂದಿದೆ. ಎರಡು 3ಜಿ ಸಿಮ್ ಆಧಾರದಲ್ಲಿ ಕಾರ್ಯನಿರ್ವಹಿಸುತ್ತದೆ.

ಬೆಲೆ 9,499 ರೂಪಾಯಿ. ಲೆನೊವೊ ಮಳಿಗೆಗಳಲ್ಲಿ ಸಿಗುತ್ತದೆ.







## ಹಿಮಾಲಯ ನೀಮ್ ಸ್ಕ್ರಬ್

ಮುಖದಲ್ಲಿ ಅಕ್ಕಿ, ಕಪ್ಪು ಮಚ್ಚೆ, ಮೊಡವೆಗಳಿಂದ ಮುಕ್ತಿ ಪಡೆಯಲು ಹಿಮಾಲಯ ಇದೀಗ ಪ್ಯೂರಿಫೈಯಿಂಗ್ ನೀಮ್ ಸ್ಕ್ರಬ್ ಎಂಬ ಉತ್ಪನ್ನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಬೇವು ಮತ್ತು ಆಪ್ರಿಕಾಟ್‌ಗಳಿಂದ ಸಮೃದ್ಧವಾಗಿದ್ದು, ತ್ವಚೆಯ ಆಳಕ್ಕಿಳಿದು ಕೆಲಸ ಮಾಡುತ್ತದೆ. ಚರ್ಮದ ನಿರ್ಜೀವ ಕಣಗಳನ್ನು ತೆಗೆದುಹಾಕಿ ತೇವಾಂಶ ಇರುವಂತೆ ನೋಡಿಕೊಳ್ಳುತ್ತದೆ. ಬೆಲೆ 100 ಗ್ರಾಂಗೆ 115 ರೂಪಾಯಿ.

ಮಾಹಿತಿಗೆ: 080 2520 0507




## ಮಹಿಳೆಯರಿಗೆ ನಿವಿಯ ಡಿಯೊಡರೆಂಟ್

ನಿವಿಯ ಇದೀಗ ಮಹಿಳೆಯರಿಗಾಗಿಯೇ ಹೊಸ 'ಫ್ರೆಶ್ ನ್ಯಾಚುರಲ್ ಮಿಸ್ಟ್' ಎಂಬ ಡಿಯೊಡರೆಂಟ್ ಒಂದನ್ನು ಬಿಡುಗಡೆ ಮಾಡಿದೆ. ಗುಲಾಬಿ ಮತ್ತು ಮಲ್ಲಿಗೆಯ ಪರಿಮಳವಿರುವ ಇದು ಕಂಕುಳ ಕೆಳಗೆ ಬೆವರಿ ವಾಸನೆ ಬರದಂತೆ ತಡೆಯುತ್ತದೆ. ತ್ವಚೆಯ ತಾಜಾತನ ಕಾಪಾಡುತ್ತದೆ.

150 ಎಂಎಲ್ ಗೆ 180 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ.